ಓಎಸ್ 15/2016

ಪಿಡಬ್ಲ್ಯೂ-1

ದಿನಾಂಕಃ 02.08.2018 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ವಾದಿ ಪರ ವಕೀಲರಿಂದ

ವಾದಿಯು ಈ ಪ್ರಕರಣದಲ್ಲಿ ಸಾಕ್ಷಿ ಹೇಳಲು ನನಗೆ ಜಿಪಿಎ ನೀಡಿದ್ದು ಅದನ್ನು ಹಾಜರು ಮಾಡಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಗ್ರಾಂಟ್ ಸರ್ಟಿಫಿಕೇಟಿನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು, ಅದರಲ್ಲಿ ಬರೆದಿರುವ ವಿಷಯಗಳು ಸರಿಯಾಗಿ ಓದಲು ಆಗದ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಲಾಗಿಲ್ಲ. ಅಹವಾಲು ತಃಖ್ತೆಯನ್ನು ನಿಪಿ 2 ಎಂದು ಗುರುತಿಸಲಾಯಿತು. 14 ಪಹಣಿಗಳನ್ನು ನಿಪಿ 3 ರಿಂದ ನಿಪಿ 16 ಎಂದು ಗುರುತಿಸಲಾಯಿತು.

(ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಮುಖ್ಯವಿಚಾರಣೆಗಾಗಿ ಮುಂದೂಡಲಾಗಿದೆ)

ತೆ ನ್ಯಾ ನ ಉ ಮೇ ಗ ಮಾಡಿಸಲಾಯಿತು.

ಓ ಹೇ ಕೇ ಸ ಇ ಎ ಒ.

ಪ್ರ.ದ.ನ್ಯಾ.ದಂ., ಕೃಷ್ಣರಾಜಪೇಟೆ.

ದಿನಾಂಕಃ 26.06.2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

**ಮುಂದುವರಿದ ಮುಖ್ಯ ವಿಚಾರಣೆ : ವಾದಿ ಪರವಾಗಿ ಶ್ರೀ ಎನ್ ಎಸ್ ಜೆ ವಕೀಲರಿಂದ**

ನನ್ನ ತಾತ ಮಲ್ಲಪ್ಪಶೆಟ್ಟಿ ಯವರಿಗೆ ದಾವಾ ಶೆಡ್ಯೂಲ್ ಸ್ವತ್ತು ಗ್ರಾಂಟ್ ಆಗಿರುವ ಬಗ್ಗೆ ಗ್ರಾಂಟ್ ಸರ್ಟಿಫಿಕೇಟಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 17 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರ ಪರವಾಗಿ ಶ್ರೀ ಕೆ ಎನ್ ಎನ್ ವಕೀಲರಿಂದಃ

ಪ್ರತಿವಾದಿಯರು ಮತ್ತು ಅವರ ವಕೀಲರು ಗೈರುಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ತೆ ನ್ಯಾ ನ ಉ ಮೇ ಗ ಮಾಡಿಸಲಾಯಿತು.

ಓ ಹೇ ಕೇ ಸ ಇ ಎ ಒ.

ಪ್ರ.ದ.ನ್ಯಾ.ದಂ., ಕೃಷ್ಣರಾಜಪೇಟೆ.

ದಿನಾಂಕಃ 30.11.2019 ರಂದು ಸಾಕ್ಷಿಗೆ ಪ್ರಮಾಣ ವಚನ ಮ್ಹಾಡಿಸಿದೆ.

**ಪಾಟೀ ಸವಾಲು 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಕೆ ಎನ್ ಎನ್ ವಕೀಲರಿಂದಃ**

ನನ್ನ ತಂದೆ ಹೆಸರು ನಂದಿಬಸಪ್ಪ ಇರುತ್ತದೆ. ಅವರ ತಂದೆ ಹೆಸರು ಬಿ ಬಿ ಮಲ್ಲಪ್ಪಶೆಟ್ಟಿ ಇರುತ್ತದೆ. ಅವರ ತಂದೆ ಹೆಸರು ಬಸವಣ್ಣಶೆಟ್ಟಿ ಇರುತ್ತದೆ. ಬಸವಣ್ಣಶೆಟ್ಟಿರವರ ಮಗ ಮಲ್ಲಪ್ಪಶೆಟ್ಟಿ ಇರುತ್ತದೆ. ಬಸವಣ್ಣಶೆಟ್ಟಿರವರ ಮಗ ಮಲ್ಲಪ್ಪಶೆಟ್ಟಿ ಮತ್ತು ಬಸವಣ್ಣಶೆಟ್ಟಿ ರವರ ಮಗ ಬಿ ಬಿ ಮಲ್ಲಪ್ಪಶೆಟ್ಟಿ ಬೇರೆ ಬೇರೆ ಆಗಿರುತ್ತಾರೆ ಎಂದರೆ ಸರಿಯಲ್ಲ. ಬಸವಣ್ಣಶೆಟ್ಟಿರವರ ಮಗ ಮಲ್ಲಪ್ಪಶೆಟ್ಟಿರವರನ್ನು ನಾನು ನೋಡಿರುತ್ತೇನೆ. ಅವರು ಸತ್ತುಹೋಗಿ 20 ವರ್ಷ ಆಗಿರುತ್ತದೆ. ನಾನು ಕೆಲಸಕ್ಕೆ ಸೇರಿ 20 ವರ್ಷ ಆಗಿರುತ್ತದೆ. ನಾನು ವಿಶ್ವೇಶ್ವರಯ್ಯ ಟೆಕ್ನಿಕಲ್ ಇನ್ಸಿಸ್ಟೂಟ್ ನಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಗ್ರಾಂಟ್ ಸರ್ಟಿಪಿಕೇಟ್ ಹಾಕಿರುತ್ತೇನೆ. ನಿಪಿ 17 ಗ್ರಾಂಟ್ ಸರ್ಟಿಪಿಕೇಟ್ ನ ಮೂಲಪ್ರತಿ ಶಿಥಿಲಗೊಂಡಿರುತ್ತದೆ. ಆ ಶಿಥಿಲಗೊಂಡಿರುವ ಗ್ರಾಂಟ್ ಸರ್ಟಿಪಿಕೇಟ್ ನ ಜೆರಾಕ್ಸನ್ನು ದೃಢೀಕೃತ ಮಾಡಿಕೊಡಲಾಗುವುದಿಲ್ಲ ಎಂದರೆ ಸರಿ. ಮೂಲಪ್ರತಿಯನ್ನು ದೃಢೀಕರಿಸಿದರೆ ಮೂಲಪ್ರತಿಯನ್ನು ದೃಢೀಕರಿಸಲಾಗಿದೆ ಎಂದು ಬರೆಯುತ್ತಾರೆ. ಅದರ ಜೆರಾಕ್ಸ್ ಮಾಡಿ ದೃಢೀಕರಿಸಿದರೆ ಜೆರಾಕ್ಸನ್ನು ದೃಢೀಕರಿಸಿರುತ್ತಾರೆ ಎಂದು ಬರೆಯುತ್ತಾರೆ ಎಂದರೆ ಸರಿ. ಮೂಲ ಗ್ರಾಂಟ್ ಸರ್ಟಿಪಿಕೇಟ್ ಶಿಥಿಲಗೊಂಡಿದೆ ಎಂದು ತಾಲ್ಲೂಕು ಅಪೀಸಿನವರು ಹಿಂಬರ ಕೊಟ್ಟಿರುವುದಿಲ್ಲ. ನಿಪಿ 17 ರಲ್ಲಿ ಜೆರಾಕ್ಸ್ ಪ್ರತಿ ದೃಢೀಕರಿಸಿದೆ ಎಂದು ಬರೆದಿದ್ದು ಮೂಲಪ್ರತಿಯನ್ನು ದೃಢೀಕರಿಸಿದೆ ಎಂದು ಬರೆದಿಲ್ಲ ಎಂದರೆ ಸರಿ. ನಿಪಿ17, 1942 ರಲ್ಲಿ ದಾವಾ ಜಮೀನು ಮಂಜೂರಾಗಿರುತ್ತದೆ. 1942 ರಲ್ಲಿ ದಾವಾ ಜಮೀನು ಮಂಜೂರಾಗಿರುವ ಬಗ್ಗೆ ಓ ಎಂ ಕಾಪಿ, ಅಹವಾಲು ತಃಖ್ತೆ, ನಕಾಶೆ, ಸ್ಥಳ ಮಹಜರ್ ಕಾಪಿ ಹಾಜರುಪಡಿಸಿದ್ದೇನೆ. ಅಹವಾಲು ತಃಖ್ತೆ, ಗ್ರಾಂಟ್ ಸರ್ಟಿಪಿಕೇಟ್, ಮಹಜರ್ ರೀಪೋರ್ಟ್ ಮತ್ತು ನಕಾಶೆ ಯಾವ ವರ್ಷದಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ನ ನಗೆ ಐಡಿಯಾ ಇಲ್ಲ.

ಯಾವುದೇ ಜಮೀನು ಮಂಜೂರಾಗಬೇಕಾದರೆ ಮಹಜರ್ ಆಗಬೇಕು, ಅಹವಾಲು ತಃಖೆಯಾಗಬೇಕು ಸ್ಕೆಚ್ ಆಗಬೇಕು, ಕಿಮ್ಮತ್ತು ಕಟ್ಟಬೇಕು ನಂತರ ಮಂಜೂರಾತಿಯ ಪತ್ರ ಕೊಡುತ್ತಾರೆ ಎಂದರೆ ಸರಿ. ತಾಲ್ಲೂಕು ಆಫೀಸಿಗೆ ನಾನು ಅರ್ಜಿಯನ್ನು ಕೊಟ್ಟಾಗ ಮೇಲೆ ಹೇಳಿದ ದಾಖಲಾತಿಗಳನ್ನು ಪಡೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಯಾವುದಾದರೂ ಜಮೀನು ಮಂಜೂರಾದರೆ ಮೇಲೆ ಹೇಳಿದ ಎಲ್ಲಾ ದಾಖಲಾತಿಗಳು ಅಡಕವಾಗಿರುತ್ತದೆ ಎಂದರೆ ಸರಿ. ನಿಪಿ 17 ರಲ್ಲಿ ಷೆಡ್ಯೂಲ್ ನಲ್ಲಿ ಪೂರ್ವಕ್ಕೆ ಕರೀಶೆಟ್ಟರವರ ಜಮೀನು ಪಶ್ಚಿಮಕ್ಕೆ ಕೃಷ್ಣರವರ ಜಮೀನು ಉತ್ತರಕ್ಕೆ ಚಿನಕುರುಳಿ ರಸ್ತೆ ದಕ್ಷಿಣಕ್ಕೆ ಮಂಚೇಗೌಡರ ಜಮೀನು ಇರುತ್ತದೆ. ನಾನು ಹೇಳಿದ ಚಕ್ಕುಬಂದಿ ನಿಪಿ 17 ರಲ್ಲಿ ಬರೆದಿರುವುದಿಲ್ಲ ಎಂದರೆ ದಾವಾ ಜಮೀನಿಗೆ ವ್ಯತಿರಿಕ್ತವಾದ ಚಕ್ಕುಬಂದಿ ಎಂದರೆ ಸರಿ. ಜಮೀನಿನ ಕಿಮ್ಮತ್ತನ್ನು ಕಟ್ಟಿದರೆ ಹಕ್ಕುಪತ್ರದ ಮೇಲುಗಡೆ ಇಷ್ಟು ಕಿಮ್ಮತ್ತು ಕಟ್ಟಿರುತ್ತಾರೆ ಎಂದು ಬರೆದಿರುತ್ತಾರೆ ಎಂದರೆ ಸರಿ. ನಿಪಿ 17 ರಲ್ಲಿ ಕಿಮ್ಮತ್ತನ್ನು ಬರೆದಿರುವುದಿಲ್ಲ ಎಂದರೆ ಸರಿ. ನಿಪಿ 2 ದಾವಾ ಜಮೀನಿನ ಮಂಜೂರಾತಿಗಾಗಿ ಅರ್ಜಿ ಕೊಟ್ಟಿರುವುದು ಎಂದರೆ ಸರಿ. ನಿಪಿ 2 ನ್ನು ದಿನಾಂಕ 27.07.1994 ರಂದು ಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ 17 ಕ್ಕೂ ಮತ್ತು ನಿಪಿ 2 ಕ್ಕೂ 54 ವರ್ಷ ವ್ಯತ್ಯಾಸ ಇದೆ ಎಂದರೆ ಸರಿ. ನಿಪಿ 3 ರಲ್ಲಿ ಐ.ಎಸ್.ಡಿ. 2ಃ1991-92 ರಂತೆ ನಂದಿಬಸಪ್ಪರವರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿ. ನಿಪಿ 4 ರಲ್ಲಿ ಐ.ಎಸ್.ಡಿ. 21ಃ1991-92 ರಂತೆ ನಂದಿಬಸಪ್ಪರವರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿ. ಐ.ಎಸ್.ಡಿ. 2ಃ1991-92 ಮತ್ತು ಐ.ಎಸ್.ಡಿ. 21ಃ1991-92 ರ ಎಂ.ಆರ್ ಕಾಪಿಯನ್ನು ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ ಎಂದರೆ ಸರಿ. ನನ್ನ ತಂದೆಯ ಹೆಸರಿಗೆ ಆಗಿರುವ ಹಂಗಾಮಿ ಸಾಗುವಳಿ ಚೀಟಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಸರ್ವೆ ನಂ 125 ರಲ್ಲಿ ದಾವಾ ಆಸ್ತಿ ಹೊರತುಪಡಿಸಿ ಒಟ್ಟು ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.

ತೆ ನ್ಯಾ ನ ಉ ಮೇ ಗ ಮಾಡಿಸಲಾಯಿತು.

ಓ ಹೇ ಕೇ ಸ ಇ ಎ ಒ.

ಪ್ರ.ದ.ನ್ಯಾ.ದಂ., ಕೃಷ್ಣರಾಜಪೇಟೆ.